ಅಧ್ಯಕ್ಷರು : ಬದಲಾವಣೆ ಏಕೆ ಮಾಡುತ್ತಿದ್ದೇನೆ ಎಂದರೆ, discussion ಆಗಲಿ ಎಂದು, ಅವರು ಬಂದ ತಕ್ಷಣ ತೆಗೆದುಕೊಳ್ಳೋಣ ಬಿಡಿ.

ಶ್ರೀ ವಾಟಾಳ್ ನಾಗರಾಜ್ : ನೀವು ತೆಗೆದುಕೊಳ್ಳಿ ಸಾರ್. ತಾವು ಬೆಳಿಗ್ಗೆ ಬಂದ ತಕ್ಷಣ ಪ್ರಶ್ನೋತ್ತರ ತೆಗೆದುಕೊಳ್ಳಿ. ಅದಕ್ಕೆ ನೀವು ಏನಾದರೂ ನಿರ್ಬಂಧ ಹಾಕಿ. ಒಂದು ಗಂಟೆ ಮೇಲೆ ಪ್ರಶ್ನೋತ್ತರ ನಡೆಯಲು ನಾನು ಅವಕಾಶ ಮಾಡಿಕೊಡುವುದಿಲ್ಲ ಎಂದೆಲ್ಲಾ ಬೇಕಾದರೆ ಹೇಳಿ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಪ್ರಶ್ನೋತ್ತರ ಮುಂದಕ್ಕೆ ಹೋದರೆ ಚೆನ್ನಾಗಿರುವುದಿಲ್ಲ. ಪ್ರಶ್ನೋತ್ತರ ಬಹಳ ಪ್ರಾಮುಖ್ಯವಾದುದು.

ಅಧ್ಯಕ್ಷರು : ಆಯಿತು, ನಾಳೆ 10 ಗಂಟೆಗೇ ಆರಂಭ ಮಾಡಿ, ನಾಳೆಯಿಂದ ಮೊದಲಿಗೆ ಪ್ರಶ್ನೋತ್ತರ ತೆಗೆದುಕೊಳ್ಳೋಣ. ಬೇರೆ ಕಲಾಪಗಳಿವೆಯಲ್ಲಾ, ಶೂನ್ಯ ವೇಳೆ ಇತ್ಯಾದಿ, ಅವುಗಳಿಗೆ 15 ನಿಮಿಷ ಮಾತ್ರ ಅವಕಾಶ ಕೊಟ್ಟು, ಉಳಿದಂತೆ ನೇರವಾಗಿ ಬೇಡಿಕೆಗಳ ಮೇಲಿನ ಚರ್ಚೆಗೆ ಹೋಗೋಣ.

(ಇ) ಅನುದಾನ ಬೇಡಿಕೆಗಳ ಮೇಲೆ ಚರ್ಚೆಯಾಗುವಾಗ ಮಂತ್ರಿಗಳು ಇಲ್ಲದಿರುವ ಬಗ್ಗೆ.

ಶ್ರೀ ಬಿ.ಎಸ್.ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ನೀವು ಯಾವ ರೀತಿಯಾಗಿ ತೆಗೆದುಕೊಳ್ಳುತ್ತೀರೋ, ಅದಕ್ಕೆ ನಾವು ಸಹಕಾರ ಕೊಡೋಣ. ಇವತ್ತು 25ನೇ ತಾರೀಖು, ಆಗಸ್ಟ್ 4–5ಕ್ಕೆಲ್ಲಾ ನಾವು ಸದನವನ್ನು ಮುಗಿಸುತ್ತಿದ್ದೇವೆ. ಅವರು ಹೇಗೋ ಒಂದು ಸಾರಿ ಡಿಮ್ಯಾಂಡ್ಸ್ ಅನ್ನು ಪಾಸ್ ಮಾಡಿಸಿಕೊಂಡು ಹೋಗಬೇಕು ಅನ್ನುವಂತಹ ತರಾತುರಿಯಲ್ಲಿ ಇದ್ದಾರೆಯೇ ಹೊರತು, ಮತ್ತೇನಿಲ್ಲ ಸಾರ್, ನಾನು ನಿಮ್ಮನ್ನು ಕೇಳುತ್ತೇನೆ, ಯಾರೋ ಒಬ್ಬಿಬ್ಬರು ಪ್ರಮುಖ ಸಚಿವರು ಯಾವುದೋ ಕಾರ್ಯಕಲಾಪಕ್ಕೆ ಹೋಗಿದ್ದಾರೆ, ಅದು ನಮಗೆ ಅರ್ಥವಾಗುತ್ತದೆ. ಆ ಮನೆಯಲ್ಲಿ ಕಳೆದ ಮೂರು ದಿವಸಗಳಿಂದ ಕಾರ್ಯಕಲಾಪ ನಡೆಯುತ್ತಿಲ್ಲ ಸಾರ್. ಇಲ್ಲಿ ಡಿಮ್ಯಾಂಡ್ಸ್ ಬಗ್ಗೆ ಚರ್ಚೆಯಾಗುವ ಟೈಮ್‌ನಲ್ಲಿ ಮೊದಲನೇ ಸಾಲಿನಲ್ಲಿ ಯಾವುದೇ ಸಚಿವರು ಇಲ್ಲಿ ಆದ್ಯತೆ ಮೇಲೆ ಕುಳಿತು ಅದರ ಬಗ್ಗೆ ಗಮನ ಕೊಡಬೇಕಾಗಿತ್ತು. ಸಾರ್, ಈ ಬಗ್ಗೆ ನೀವು ಅವರಿಗೆ ಎಷ್ಟು ಸಲ ಹೇಳಬಹುದು? ನೀವು ಎಷ್ಟು ಸಾರಿ ಅವರ ಕಿವಿ ಹಿಂಡಬಹುದು? ಅಂದರೆ, ಎಲ್ಲೋ ಒಂದು ಕಡೆ ಅವರಿಗೆ ಆಸಕ್ತಿ ಇಲ್ಲ. ನಾನು ಹೇಳುವುದು ಏನೆಂದರೆ, ರಾಜಕಾರಣದಲ್ಲಿ ಗೊಂದಲಗಳು ಇರುತ್ತವೆ, ಆ ಗೊಂದಲದಲ್ಲೇ ಅವರು ಇರುವುದಾದರೆ, ಬೆಳಿಗ್ಗೆಯಿಂದ ರಾತ್ರಿ ಹೊತ್ತಿನವರೆಗೆ ಬೇರೆ ಬೇರೆ ಸಮಯದಲ್ಲಿ ಅವರು ಆ ಗೊಂದಲಗಳಲ್ಲಿ ತಲ್ಲೀನರಾಗಬೇಕೇ ಹೊರತು, ಇಲ್ಲಿ ಕಾರ್ಯಕಲಾಪ ನಡೆಯುವ ಟೈಮ್‌ನಲ್ಲಿ ಒಂದೊಂದು ರೂಮಿನಲ್ಲಿ ಒಬ್ಬೊಬ್ಬ ಮಂತ್ರಿಗಳು ಕುಳಿತುಕೊಂಡು ತಮ್ಮ ಮುಂದಿನ ರಾಜಕೀಯ ಭವಿಷ್ಯದ ಬಗ್ಗೆ ಮಾಡಿಕೊಂಡು ಕುಳಿತರೆ, ಈ ಸದನದ ಕಥೆ ಏನು? ಇದನ್ನು ನಂಬಿರುವಂತಹ ಜನಗಳ ಗತಿ ಏನು? ಪ್ರತಿಪಕ್ಷಗಳಾದ ನಾವುಇಲ್ಲಿ ಕೆಲಸ ಮಾಡುವುದು ಹೇಗೆ? ಮಾನ್ಯ ಶ್ರೀರಾಮರೆಡ್ಡಿಯವರು ನಾಲ್ಕು ಸಲ ಹೇಳಿದರು, ಮಾನ್ಯ ವಾಟಾಳ್‌ರವರೂ ಸಹ ಇದರ ಬಗ್ಗೆ ಪ್ರಸ್ತಾಪ ಮಾಡಿದರು. ಯಾರೂ ಇವರಿಗೆ ಹೇಳುವವರು, ಕೇಳುವವರೇ ಇಲ್ಲವಲ್ಲಾ, ಇದು ಗೌರವ ತರುವಂತಾದ್ದು ಅಲ್ಲ ಸಾರ್.

ಅಧ್ಯಕ್ಷರು : ಚೀಫ್ ವಿಪ್‌ರವರೆ, ಸದನದಲ್ಲಿ ನಾಲ್ಕೈದು ಜನ ಮಂತ್ರಿಗಳು ಮಾತ್ರ ಇದ್ದಾರೆ. ಮುಂದಿನ ಸಾಲಿನಲ್ಲಿ ಯಾರೂ ಮಂತ್ರಿಗಳೇ ಇಲ್ಲ ದಯಮಾಡಿ ಎಲ್ಲರನ್ನೂ ಕರೆಸಿ..

ಶ್ರೀ ಬಿ.ಎಸ್.ಯಡಿಯೂರಪ್ಪ : ಯಾವತ್ತಾದರೂ ಒಂದು ದಿವಸ ಪೂರ್ಣ ಮಂತ್ರಿಮಂಡಲದ ಸದಸ್ಯರು ನೋಡುವುದಕ್ಕಾದರೂ ಸದನದಲ್ಲಿ ಕುಳಿತಿದ್ದಂತಹ ಉದಾಹರಣೆ ಇದೆಯೇ ಸಾರ್? ಮಂತ್ರಿಗಳೆಲ್ಲರ ಮುಖವನ್ನಾದರೂ ತಾವು ನೋಡಿದ್ದೀರಾ ಎಂದು ನಾನು ತಮಗೆ ಕೇಳಬೇಕಾಗುತ್ತದೆ. ಇಷ್ಟೊಂದು ಸದನಕ್ಕೆ ನಿರ್ಲಕ್ಷ್ಯ ಮಾಡುವಂತಾದ್ದು ಅಗೌರವ ತರುವಂತಾದ್ದು, ನಿಮ್ಮ ಪೀಠಕ್ಕೆ ಮಾಡುತ್ತಿರುವ ಅಗೌರವವೇ ಸರಿ. ಪ್ರಜಾತಂತ್ರ ವ್ಯವಸ್ಥೆಗೆ ಮಾಡುತ್ತಿರುವ ಅಪಚಾರ ಇದು.

ಅಧ್ಯಕ್ಷರು : ಹಿರಿಯ ಮಂತ್ರಿಗಳು ಬರಲಿ, ಆಯಿತು, ಆರಂಭ ಮಾಡೋಣ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಅಧ್ಯಕ್ಷರೆ, ಕಂದಾಯ, ಗ್ರಾಮೀಣಾಭಿವೃದ್ಧಿ, ಆಹಾರ, ವಾರ್ತಾ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ಕಾನೂನು ಮತ್ತು ಸಂಸದೀಯ, ಇಂಧನ ಮತ್ತು ಲೋಕೋಪಯೋಗಿ ಅರಣ್ಯ ಆರೋಗ್ಯ, ಆರ್ಥಿಕ, ಯೋಜನೆ, ಒಳಾಡಳಿತ ಮತ್ತು ಇಲಾಖಾ ಮಂತ್ರಿಗಳು ಸದನದಲ್ಲಿ ಇಲ್ಲ.

ಅಧ್ಯಕ್ಷರು : ಅರಣ್ಯ ಮಂತ್ರಿಗಳಿದ್ದಾರೆ, ಆರೋಗ್ಯ ಮಂತ್ರಿಗಳಿದ್ದಾರೆ, ಗ್ರಾಮೀಣಾಭಿವೃದ್ಧಿ ಮಂತ್ರಿಗಳಿದ್ದಾರೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಮಂತ್ರಿಗಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಾರ್, ನಾವು ಮಾತನಾಡುವಾಗ, ಟೈಮ್ ಆಯಿತು, ಟೈಮ್ ಆಯಿತಿ, ಕುಳಿತುಕೊಳ್ಳಿ ಎಂದು ನಮ್ಮ ಮೇಲೆ ಶಿಸ್ತನ್ನು ಹೇರುತ್ತೀರೇ ಹೊರತು, ಅವರ ಮೇಲೇನೂ ಶಿಸ್ತು ಇಲ್ಲವೇ ?

ಅಧ್ಯಕ್ಷರು : ಅವರನ್ನೂ ಕರೆಸಬೇಕು.

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರ ಮೇಲೆ ಏನೂ ಶಿಸ್ತು ಕ್ರಮ ಇಲ್ಲವೇ ? ನಾವು ಮಾತನಾಡುವಾಗ ಮಾತ್ರ, ಕುಳಿತುಕೊಳ್ಳಿ, ಕುಳಿತುಕೊಳ್ಳಿ, ಟೈಮಾಯಿತು ಎಂದು ಹೇಳುತ್ತೀರಿ.

(ಗೊಂದಲ)

ಅಧ್ಯಕ್ಷರು : ಈಗ ನಾನು ಅವರನ್ನೂ ಕರೆಯಲಿಕ್ಕೆ ಕಳುಹಿಸಿದ್ದೇನಲ್ಲಾ. ಅವರೂ ಬರಬೇಕು..

(ಗೊಂದಲ)

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಸದಸ್ಯರು ಮಾತನಾಡುವಾಗ ಮಾತ್ರ ಟೈಮು, ಟೈಮು ಎಂದು ಎಲ್ಲರನ್ನೂ ನೀವು ಕೂರಿಸಿಬಿಡುತ್ತೀರಿ. ಮಂತ್ರಿಗಳಿಗೆ ಏನೂ ಶಿಸ್ತು ಬೇಕಾಗಿಲ್ಲವೇ ? 20 ಡಿಮ್ಯಾಂಡ್ ಹಾಕಿದ್ದಾರೆ, ಆದರೆ ಸಂಬಂಧಪಟ್ಟಂತಹ ಮಂತ್ರಿಗಳು ಎಷ್ಟು ಜನ ಇದ್ದಾರೆ ನೋಡಿ.

(ಗೊಂದಲ)

ಅಧ್ಯಕ್ಷರು : ಅವರೂ ಸಹ ಬರಬೇಕು.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : 20 ಡಿಮ್ಯಾಂಡ್ ಇದ್ದರೂ ಸಂಬಂಧಪಟ್ಟವರು ಎಷ್ಟು ಜನ ಇದ್ದಾರೆ ಎಂಬುದನ್ನು ಮಾನ್ಯ ಅಧ್ಯಕ್ಷರೆ, ನೀವೇ ನೋಡಿ.

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) : ಸನ್ಮಾನ್ಯ ಅಧ್ಯಕ್ಷರೆ, ಅವರ ಅಭಿಪ್ರಾಯ ವ್ಯಕ್ತ ಮಾಡುತ್ತಿರತಕ್ಕಂಥದ್ದು ಸರಿಯಾಗಿದ್ದರೂ ಕೂಡ, ನಾನು ಮಾತ್ರ ಇಲ್ಲಿ ಹೇಳುತ್ತೇನೆ, Human rights forum for Dalith liberation ಎಂಬ ಸಂಸ್ಥೆಯ ಸುಮಾರು 400–500 ಜನ ಬೆಳಿಗ್ಗೆಯೇ ನನ್ನ ಮನೆ ಮುಂದೆ ಸತ್ಯಾಗ್ರಹ ಮಾಡುತ್ತಿದ್ದರು...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ನಿಮ್ಮ ಬಗ್ಗೆ ನಾವು ಹೇಳುತ್ತಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ನಮ್ಮ ಬಗ್ಗೆ ಎಂದಲ್ಲ ವಿಷಯ ತಿಳಿಸಬೇಕಾದುದು ನನ್ನ ಕರ್ತವ್ಯವಾಗಿದೆ. ಆದ್ದರಿಂದ ಅವರಿಗೆ ನಾನು...

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ವೈಯಕ್ತಿಕವಾಗಿ ಮಾನ್ಯ ಎಂ.ಪಿ.ಪ್ರಕಾಶ್ ಏಕೆ ಬರಲಿಲ್ಲ ಎಂದು ನಾವು ಕೇಳುತ್ತಿಲ್ಲ. 20 ಡಿಮ್ಯಾಂಡ್ ಇಟ್ಟಿದ್ದೀರಿ, ಆ 20 ಡಿಮ್ಯಾಂಡ್ಸ್‌ಗೆ ಸಂಬಂಧಪಟ್ಟಂತಹ ಇಲಾಖೆ ಮಂತ್ರಿಗಳು ಎಷ್ಟು ಜನ ಇದ್ದಾರೆ ಎಂದು ಮಾತ್ರ ನಾವು ಕೇಳುತ್ತಿದ್ದೇವೆ. ಮಾನ್ಯ ಎಂ.ಪಿ.ಪ್ರಕಾಶ್‌ರವರು ಏಕೆ ಬರಲಿಲ್ಲ ಎಂದು ನಾವು ಕೇಳಲಿಲ್ಲ.

ಶ್ರೀ ಎಂ.ಪಿ.ಪ್ರಕಾಶ್ : ತಾವು ಕೇಳಿರತಕ್ಕಂಥದ್ದು ನಿಜವಾಗಿಯೂ ಕೂಡ ಸರಿಯಾದುದ್ದೇ. ಇದರ ಬಗ್ಗೆ ನನ್ನದೇನೂ ಅಕ್ಷೇಪಣೆ ಇಲ್ಲ. ಆದರೆ ವೈಯಕ್ತಿಕವಾಗಿ ಸ್ಪಷ್ಟೀಕರಣ ಕೊಡಬೇಕಾದುದು ನನ್ನ ಕರ್ತವ್ಯವಾಗಿರುವುದರಿಂದ, ನಾನು ಸ್ಪಷ್ಟೀಕರಣ ಕೊಡುತ್ತಿದ್ದೇನೆ. ಆದ್ದರಿಂದಾಗಿ, ಅಲ್ಲಿ ಹೋಗಿ ಅವರ ಮನವಿಯನ್ನು ಸ್ವೀಕಾರ ಮಾಡಿಕೊಂಡು ಇಲ್ಲಿಗೆ ಬಂದಿದ್ದೇನೆ. ದಯವಿಟ್ಟು ಅಷ್ಟರಮಟ್ಟಿಗೆ ನನಗೆ ಕ್ಷಮೆ ಕೊಡಬೇಕೆಂದು ತಮ್ಮಲ್ಲಿ ನಾನು ವಿನಂತಿ ಮಾಡುತ್ತೇನೆ.

ಅಧ್ಯಕ್ಷರು : ಆಯಿತು, ಈಗ ಚರ್ಚೆ ಆರಂಭ ಮಾಡೋಣ. ಮಾನ್ಯ ಸಿ.ಟಿ.ರವಿಯವರು ಮಾತನಾಡಿ.

ಶ್ರೀ ಸಿ.ಟಿ.ರವಿ : ಮಾನ್ಯ ಅಧ್ಯಕ್ಷರೆ, ನನಗೆ ...

(ಈ) ದಿ ಲಿಮಿಟೇಶನ್ ಕಮಿಟಿ ಕಾನ್ಸ್ಟಿಟ್ಯುಟ್ ಆಗಿದ್ದು ಪ್ರಾತಿನಿಧ್ಯ ನೀಡುವಲ್ಲಿ ತಾರತಮ್ಯ ಆಗಿರುವ ಬಗ್ಗೆ.

ಶ್ರೀ ಮಲ್ಲಿಕಾರ್ಜುನ ಖರ್ಗೆ (ಜಲಸಂಪನ್ಮೂಲ ಹಾಗೂ ಸಾರಿಗೆ ಸಚಿವರು) : ಮಾನ್ಯ ರವಿಯವರೆ, ಒಂದು ನಿಮಿಷ. ಮಾನ್ಯ ಅಧ್ಯಕ್ಷರೆ, ಆ Delimitation committee constitute ಆಗಿದೆ. ಅದರಲ್ಲಿ ಬಹುಶಃ proportional representation ಇಲ್ಲ, atleast ಕೇಳಿ ತಾವಾದರೂ ಮಾಡಿದ್ದರೆ ಸರಿ ಹೋಗುತ್ತಿತ್ತು. ಇದೇನಾಗಿದೆ ಎಂದರೆ, 9ನೇ ತಾರೀಖು ಡೆಲ್ಲಿಯಲ್ಲಿ ಮೀಟಿಂಗ್ ಇಟ್ಟುಕೊಂಡಿದ್ದಾರೆ. ಅದರಲ್ಲಿ ಬಹಳಷ್ಟು imbalance ಆಗಿ ಬಿಟ್ಟಿದೆ. ವಿಶೇಷವಾಗಿ ಈ ಕಡೆ ಕಾಂಗ್ರೆಸ್ ಪಕ್ಷದವರು 65 ಇದ್ದಾರೆ, ಅದರಲ್ಲಿ ಎರಡು, ಇನ್ನೊಂದು ಪಕ್ಷದಲ್ಲಿ 58 ಇದ್ದರೆ, ಅದರಲ್ಲಿ ನಾಲ್ಕು ಇನ್ನೊಂದು 90 ಇದ್ದರೆ, ಅಲ್ಲಿ ನಾಲ್ಕು, ಇನ್ನು ಬೇರೆ independents ಎಲ್ಲಾ ಸೇರಿ, ಅವರು 20ರ ಮೇಲೆ ಇದ್ದಾರೆ, ಸ್ವಲ್ಪ imbalance ಆಗಿದೆ. ಇದು ಏನಾಗುತ್ತದೆ ಎಂದರೆ, ಅಲ್ಲಿ repersent ಮಾಡಬೇಕಾದರೆ, ಸ್ವಲ್ಪ ಎಲ್ಲಾ party views ಅನ್ನೂ ಕೂಡ effective ಆಗಿ present ಮಾಡುವುದಕ್ಕೆ ಅವಕಾಶ ಮಾಡಿಕೊಡತಕ್ಕಂಥದ್ದು ಬಹಳ ಮುಖ್ಯ Ultimately, Election Committeeಯವರು ಏನು ಮಾಡುತ್ತಾರೋ ಮಾಡಲಿ. ಆದರೆ